ಕರ್ನಾಟಕ ವಿಧಾನ ಪರಿಷತ್

140ನೇ ಅಧಿವೇಶನ 2020

ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ : 274

ಸದಸ್ಯರ ಹೆಸರು : ಶ್ರೀ ಕೆ. ಅಬ್ದುಲ್ ಜಬ್ಬಾರ್(ನಾಮನಿರ್ದೇಶನ)

ಉತ್ತರಿಸುವ ದಿನಾಂಕ : 04.03.2020

ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿ, ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಇಲಾಖೆ.

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ)	ರಾಷ್ಟ್ರೀಯ ಹೆದ್ದಾರಿ ಸುಂಕ ಪಾವತಿ ಕೇಂದ್ರ (**Toll Plaza**) ಗಳಲ್ಲಿ ಮತ್ತು ಇತರೆಡೆಗಳಲ್ಲಿ ಜನಪ್ರತಿನಿಧಿಗಳ ಮತ್ತು ಗಣ್ಯವಕ್ತಿಗಳ ಸುಗಮ ಸಂಚಾರಕ್ಕೆ ರಾಜ್ಯ ಸರ್ಕಾರದಿಂದ ಗಣ್ಯವ್ಯಕ್ತಿಗಳಿಗೆ ಕಾರ್‌ಪಾಸ್ ನೀಡಲಾಗಿದ್ದರೂ ಸಹ ಪ್ರತ್ಯೇಕವಾಗಿ ಫಾಸ್ಟ್‌ಟ್ಯಾಗ್ ಅಳವಡಿಸಿಕೊಳ್ಳುವ ಅವಶ್ಯಕತೆ ಇದೆಯೇ;	ಕೇಂದ್ರ ಭೂ ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯ, ಭಾರತ ಸರ್ಕಾರದ **FAStag** ಬಗ್ಗೆ ದಿನಾಂಕ 08-11-2019ರ ಅಧಿಸೂಚನೆಯ ಮಾರ್ಗಸೂಚಿ ಹಾಗೂ **Standard Operation Procedure (SOP)** ರಂತೆ ವಿನಾಯಿತಿ ಒಳಪಡುವ ಎಲ್ಲಾ ಗಣ್ಯ ವ್ಯಕ್ತಿಗಳು ಹಾಗೂ ಜನಪ್ರತಿನಿಧಿಗಳ ವಾಹನಗಳು ಸಹ **FAStag** ಹೊಂದಿರುವುದು ಕಡ್ಡಾಯವಾಗಿದೆ.
ಆ)	ಜನಪ್ರತಿನಿಧಿಗಳು/ಗಣ್ಯವಕ್ತಿಗಳು ಗರಿಷ್ಟ ಎಷ್ಟು ವಾಹನಗಳಿಗೆ ಫಾಸ್ಟ್‌ಟ್ಯಾಗ್/ಹೆದ್ದಾರಿ ಸುಂಕ ವಿನಾಯಿತಿ ಪಾಸ್ ಪಡೆದುಕೊಳ್ಳಬಹುದು;	ವಿಧಾನಸಭಾ ಸದಸ್ಯರು ಹಾಗೂ ವಿಧಾನ ಪರಿಷತ್ ಸದಸ್ಯರುಗಳಿಗೆ ಒಂದು ವಾಹನಕ್ಕೆ ಸುಂಕ ವಿನಾಯಿತಿ ಹೊಂದಿರುವ **FAStag** ಅನ್ನು ಆಯಾ ರಾಜ್ಯದಲ್ಲಿ ಸಂಚರಿಸಲು ಹಾಗೂ ಲೋಕಸಭಾ ಸದಸ್ಯರುಗಳ 1 ವಾಹನಕ್ಕೆ ಆಯಾ ರಾಜ್ಯದಲ್ಲಿ ಹಾಗೂ ಮತ್ತೊಂದು ನವದೆಹಲಿಯಲ್ಲಿ ಸಂಚರಿಸಲು ಅನುವಾಗುವಂತೆ ವಿತರಿಸಲಾಗುವುದು.
ಇ)	ವಿನಾಯಿತಿ ಫಾಸ್ಟ್‌ಟ್ಯಾಗ್ ಅನ್ನು ಇದುವರೆಗೂ ನೀಡದಿರುವುದಕ್ಕೆ ಕಾರಣ?	ಕರ್ನಾಟಕ ರಾಜ್ಯ ವಿಧಾನ ಮಂಡಲ ಸಚಿವಾಲಯದಿಂದ ಸ್ವೀಕೃತಿಯಾಗಿರುವ ವಿಧಾನಸಭೆ ಮತ್ತು ವಿಧಾನ ಪರಿಷತ್ ಸದಸ್ಯರ ಪಟ್ಟಿಯಂತೆ **FAStag** ನೀಡುವ ಬಗ್ಗೆ ಎನ್‌ಹೆಚ್‌ಎಐ ಕೇಂದ್ರ ಕಛೇರಿಯ ಅನುಮೋದನೆ ಪಡೆಯಲು ಕ್ರಮ ವಹಿಸಿದ್ದು, ಎನ್‌ಹೆಚ್‌ಎಐ ಕೇಂದ್ರ ಕಛೇರಿಯಿಂದ ಈಗಾಗಲೇ 20 ವಿಧಾನ ಪರಿಷತ್ ಸದಸ್ಯರ ವಾಹನಗಳಿಗೆ ಶುಲ್ಕ ವಿನಾಯಿತಿ ಹೊಂದಿರುವ **FAStag** ನೀಡಲು ಅನುಮೋದನೆಯಾಗಿದ್ದು, ಇನ್ನುಳಿದ ಗಣ್ಯ ವ್ಯಕ್ತಿಗಳ ವಾಹನಗಳಿಗೆ **FAStag** ವಿತರಿಸಲು ಕ್ರಮ ವಹಿಸಲಾಗುತ್ತಿದೆ ಎಂದು ಪ್ರಾಂತೀಯ ಎನ್‌ಹೆಚ್‌ಎಐ ಪ್ರಾಧಿಕಾರವು ವರದಿ ಮಾಡಿರುತ್ತದೆ.

ಸಂಖ್ಯೆ:ಲೋಇ 51 ಸಿಎನ್‌ಹೆಚ್ 2020(ಇ)

(ಗೋವಿಂದ ಎಂ. ಕಾರಜೋಳ)
ಉಪ ಮುಖ್ಯಮಂತ್ರಿ, ಲೋಕೋಪಯೋಗಿ ಮತ್ತು
ಸಮಾಜ ಕಲ್ಯಾಣ ಇಲಾಖೆ